**ಸಾಕ್ಷಿಯನ್ನು ದಿಃ 29.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಬಿ ವಕೀಲರಿಂದಃ-**

ನಾನು ಡಿಗ್ರಿ ಪದವೀಧರ. ಎಂ.ಕಾಂ ಡಿಗ್ರಿ ಮುಗಿಸಿರುತ್ತೇನೆ. ನಾನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೊರ ಗುತ್ತಿಗೆಯಲ್ಲಿ ಡೆಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೆ ತೊಂದರೆ ಇಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿಯನ್ನು ನಾನೆ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಡೆಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಈಗ್ಗೆ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ, ಮೊದಲು ಬ್ಯೂಸಿನೆಸ್ ಮತ್ತು ಕೃಷಿ ಮಾಡಿಕೊಂಡಿದ್ದೆ ಎನ್ನುತ್ತಾರೆ. ಬ್ಯೂಸಿನೆಸ್ ಎಂದರೆ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದೆ. ಯಾವುದೆ ಫೈನಾನ್ಸ್ ಮನಿ ಲೆಂಡಿಂಗ್ ಲೈಸನ್ಸ್ ಪಡೆದು ವ್ಯವಹಾರ ಮಾಡುತ್ತಿರಲಿಲ್ಲ, ಹಾಗೆ ಸಣ್ಣ ಪುಟ್ಟ ವ್ಯವಹಾರ ಮಾಡುತ್ತಿದ್ದೆ. ಪೈನಾನ್ಸ್ ವ್ಯವಹಾರ ಮಾಡುತ್ತಿದ್ದ ಬಗ್ಗೆ ದಾಖಲೆ ಇಲ್ಲ. ನನಗೆ ಒಂದು ಮುಕ್ಕಾಲು ಎಕರೆ ಅಡಿಕೆ ತೋಟ ಇದ್ದು, ಗುತ್ತಿಗೆ ಪಡೆದು ಗದ್ದೆ ಮಾಡುತ್ತಿದ್ದೆ. ಹೊಗೆಸೊಪ್ಪು, ಜೋಳ, ರಾಗಿ ಮತ್ತು ಶುಂಠಿ ಬೆಳೆ ಮಾಡುತ್ತಿದ್ದೆ. ತಾಯಿ ಹೆಸರಿನಲ್ಲಿ ಇರುವ ಒಂದು ಮುಕ್ಕಾಲು ಎಕರೆ ತೋಟ ಗೋವಿಂದನ ಹಳ್ಳಿಯಲ್ಲಿ ಇರುತ್ತದೆ. ನಾನು ಯಾವುದೆ ಬ್ಯೂಸಿನೆಸ್ ಆಗಲಿ, ಕೃಷಿಯನ್ನಾಗಲಿ ಮಾಡುತ್ತಿರಲಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತನು ಹಿಂದೆ ಮಾಡಿದ ಸಾಲ ತೀರಿಸಲು ಹಾಗೂ ಮನೆ ಖರ್ಚಿಗೆಂದು ಸಾಲ ಪಡೆದಿದ್ದರು. ಸಾಕ್ಷಿ ಪುನಃ ಮನೆ ಖರ್ಚು ಎಂದು ಮನೆ ರಿಪೇರಿಗೆಂದು ಸಾಲ ಪಡೆದಿದ್ದರು ಎಂದು ನುಡಿಯುತ್ತಾರೆ. ಆರೋಪಿ ಮೊದಲು 2020-2021 ನೇ ಸಾಲಿನ ವರೆಗೂ ಫೈನಾನ್ಸ್ ಮತ್ತು ಸಣ್ಣಪುಟ್ಟ ಬ್ಯೂಸಿನೆಸ್ ಮಾಡಿಕೊಂಡಿದ್ದರು. ಆರೋಪಿ ನನಗೆ ಯಾವುದೆ ಕಾಲದಲ್ಲೂ ಪರಿಚಯ ಇಲ್ಲ ಎಂದರೆ ಸರಿಯಲ್ಲ, 18-20 ವರ್ಷಗಳಿಂದಲೂ ಪರಿಚಯ ಇರುತ್ತಾರೆ ಎನ್ನುತ್ತಾರೆ. ಹಾಗೆ ಪರಿಚಯ ಇದ್ದರೆ ಆತ ಈಗ ಏನು ಕೆಲಸ ಮಾಡುತ್ತಿದ್ದ ಎಂದು

ಗೊತ್ತಿರುತ್ತದೆ ಎಂದರೆ ಸಾಕ್ಷಿ 2021-2022 ನೇ ಸಾಲಿನಿಂದ ನನಗೂ ಅವರಿಗೂ ಸಂಪರ್ಕ ಇರುವುದಿಲ್ಲ ಎನ್ನುತ್ತಾರೆ. 2021-2022 ಕ್ಕೂ ಮೊದಲು ನಿಮ್ಮಿಬ್ಬರೂ ಪಾರ್ಟ್ನರ್ಶಿಪ್ ವ್ಯವಹಾರ ಮಾಡುತ್ತಿದ್ದಿರಿ ಎಂದರೆ ಆ ರೀತಿಯ ವ್ಯವಹಾರ ಮಾಡುತ್ತಿರಲಿಲ್ಲ ಎನ್ನುತ್ತಾರೆ. ಆರೋಪಿ ಹಣ ಕೇಳಿದ 2-3 ದಿನಗಳ ನಂತರ ಅವರಿಗೆ ಹಣ ಕೊಟ್ಟಿರುತ್ತೇನೆ. ಆರೋಪಿ 2 ಲಕ್ಷ ರೂ. ಹಣ ಕೇಳಿದ್ದರು. ಆರೋಪಿಯ ಮನೆ ಕಡೆ ಆರ್ಥಿಕವಾಗಿ ಸ್ಥಿತಿವಂತರಿದ್ದು ನನ್ನ ಬಳಿ ಹಣ ಕೇಳುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆ ಕೆ.ಎಸ್.ಆರ್.ಟಿ.ಸಿ ಇಲಾಖೆಯಲ್ಲಿ ಅಡಿಟಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು, ಸಾಕಷ್ಟು ಹಣಕಾಸು ಹೊಂದಿರುತ್ತಾರೆ ಎಂದರೆ ಆ ಬಗ್ಗೆ ನಾನು ತಿಳಿದುಕೊಂಡಿಲ್ಲ ಎನ್ನುತ್ತಾರೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೆ ರೀತಿಯ ವ್ಯವಹಾರ ನಡೆದಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.